ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Thursday, the 25th January 1979/Magha 5, 1900 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral answers were given)

Protection of Sangameshwara Temple from Submersion

183. SRI PARAPPA KALLIGUDDA(Bagalkot)—Will the Chief Minister be pleased to state :—

(a) whether the ancient and Holy Sangameshwara Temple in Hunagund Taluk of Bijapur District will be submerged under the Narayanapura Dam of Upper Krishna Project;

(b) if so, the steps taken to protect the said Holy Temple from submersion ;

(c) whether any scheme has been prepared in order to protect the said temple ; if so, the salient features of the same ;

(d) when the work of Narayanapura Dam will be completed and whether before its completion the Government will prepare a scheme to see that the Holy Temple is not displaced and submerged in the water?

SRI D. DEVARAJ URS (Chief Minister)—

(a) Yes it will be submerged.

(b) Earthen bund will be constructed arround the temple and it will be protected from submersion.

(c) The temple area measuring 83 & 40 (Meters) will be protected by raising the height of earthen bund by 6.46 (RL. 498.75) Meter from the water level of Narayanapura Reservoir The road from Bagalkote will be linked to the West Bank and will be made fit for traffic. An R.C.C. dry well will be constructed for Aikyamantapam. A bridge will be constructed from East bank to the Aikyamantapam.

(d) It has been planned to complete the works of Narayanapura Dam by June, 1980. With a view to aviod displacement and submersion of the said temple ; the schemes as mentioned above, will be taken up.

ಶ್ರೀ ಪರಪ್ಪ ಕಲ್ಲಿಗುಡ್ಡ :— ಸ್ವಾಮಿ, ವಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿರುವ ಪವಿತ್ರ ಸಂಗಮೇಶ್ವರ ದೇವಸ್ಥಾನವು ನಾರಾಯಣಪುರ ಆಣೆಕಟ್ಟಿನ ನೀರಿನಲ್ಲಿ ಮುಳುಗುತ್ತಿರುವುದು ನಿಜವೆ?

† ಶ್ರೀ ಡಿ. ದೇವರಾಜ ಅರಸ್ :— ಮುಳುಗುತ್ತಿದೆ ಅಂತ ಗೊತ್ತಾಗಿದೆ.

ಶ್ರೀ ಪರಪ್ಪ ಕಲ್ಲಿಗುಡ್ಡ :— ಪವಿತ್ರವಾದ ದೇವಸ್ಥಾನ ಹಾಗೂ ಮಂಟಪವನ್ನು ಉಳಿಸಲಿಕ್ಕೆ ಕೈಗೊಂಡ ಕಾರ್ಯಕ್ರಮಗಳೇನು?

ಶ್ರೀ ಡಿ. ದೇವರಾಜ ಅರಸ್:— ಸಂಗಮೇಶ್ವರ ದೇವಸ್ಥಾನದ ಮಂಟಪವನ್ನು ರಕ್ಷಣೆ ಮಾಡುವ ದಿಸೆಯಲ್ಲಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಲೋಕೋಪಯೋಗಿ ಇಲಾಖೆಯವರು ಆಲೋಚನೆ ಮಾಡಿ ಸುಮಾರು ೧೮ ಲಕ್ಷ ರೂಪಾಯಿಯ ಅಂದಾಜು ತಯಾರು ಮಾಡಿದ್ದಾರೆ. ಜಲಾಶಯದ ಎತ್ತರಕ್ಕಿಂತ ದೇವಸ್ಥಾನದ ಸುತ್ತಲೂ ಹಾಕತಕ್ಕ ಮಣ್ಣಿನ ಗೋಡೆಯನ್ನು ಎತ್ತರಿಸಿ ದೇವಸ್ಥಾನದ ಜಾಗವನ್ನು ರಕ್ಷಣೆ ಮಾಡಲಾಗುವುದು. ಆರ್.ಸಿ.ಸಿ. ಒಣಬಾವಿಯನ್ನು ಐಕ್ಯ ಮಂಟಪಕ್ಕೆ ಕಟ್ಟಲಾಗುವುದು. ಬಾಗಲಕೋಟೆಯಿಂದ ಬರುವ ರಸ್ತೆಯನ್ನು ಪಶ್ಚಿಮ ದಂಡೆಗೆ ಸೇರಿಸಿ ಓಡಾಟಕ್ಕೆ ಅನುಕೂಲ ಮಾಡಿಕೊಡಲಾಗುವುದು, ಯಾತ್ರಾರ್ಥಿಗಳು ಮೇಲ್ಬಾಗಕ್ಕೆ ಬರುವಹಾಗೆ ಅನುಕೂಲ ಮಾಡಿಕೊಡಲಾಗುವುದು. ಪೂಜಾರಿಗಳಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಮನೆಕಟ್ಟಿಸುವುದು, ವಿದ್ಯುಚ್ಛಕ್ತಿ ದೀಪ ಹಾಕಿಸುವ ಕಾರ್ಯವನ್ನು ಏರ್ಪಾಡು ಮಾಡಲಾಗಿದೆ.

ಶ್ರೀ ಪರಪ್ಪ ಕಲ್ಲಿಗುಡ್ಡ :— ೧೯೮೦ರ ಹೊತ್ತಿಗೆ ನಾರಾಯಣಪುರ ಆಣೆಕಟ್ಟು ಮುಗಿಯುತ್ತದೆಯೆ?

ಶ್ರೀ ಡಿ. ದೇವರಾಜ ಅರಸ್ :— ೧೯೮೦ಕ್ಕೆ ಮುಗಿಯುವುದಿಲ್ಲ.

ಶ್ರೀ ಪರಪ್ಪ ಕಲ್ಲಿಗುಡ್ಡ :— ೧೯೮೦ಕ್ಕೆ ಮುಗಿಯುತ್ತೆ ಅಂತ ಬರೆದಿದ್ದೀರಿ.

ಶ್ರೀ ಡಿ. ದೇವರಾಜ ಅರಸ್ :— ಮೊದಲನೇ ಹಂತ, ಎರಡನೇ ಹಂತ ಎಂದು ಇದೆ ಎರಡನೇ ಹಂತದಲ್ಲಿ ಮುಗಿಸಲಾಗುವುದು.

ಶ್ರೀ ಪರಪ್ಪ ಕಲ್ಲಿಗುಡ್ಡ :— ಅಲ್ಲಿ ಎರಡು ಹೊಳೆ ಬರುತ್ತಿದ್ದು ಮಣ್ಣಿನ ಗೋಡೆಯನ್ನು ಕೊರೆದು ಹೋಗುತ್ತಿರುವುದು ನಿಜವೆ ?

ಶ್ರೀ ಡಿ. ದೇವರಾಜ ಅರಸ್ :— ಮುಖ್ಯವಾಗಿ ದೇವಸ್ಥಾನ ಉಳಿಯಬೇಕು: ಅದಕ್ಕೆ ಏನು ಮಾಡಬೇಕೋ ಅದನ್ನು ಇಂಜಿನಿಯರುಗಳು ಮಾಡುತ್ತಾರೆ. ಈ ವಿಚಾರ ನಮಗೂ ನಿಮಗೂ ಆಷ್ಟು ಅರ್ಥವಾಗುವುದಿಲ್ಲ.

ಶ್ರೀ ಪರಪ್ಪ ಕಲ್ಲಿಗುಡ್ಡ :— ಈ ದೇವಸ್ಥಾನ ಬಹಳ ಪುರಾತನವಾದುದು. ಇದು ಮುಳುಗಡೆಯಾಗಿಬಿಡುತ್ತದೆಂದು ಅಲ್ಲಿನ ಜನರು ಬಹಳ ಗಾಬರಿಗೊಳಗಾಗಿದ್ದಾರೆ. ದೇವಸ್ಥಾನವು ಮುಳುಗಡೆಯಾಗದಂಥ ಕಾರ್ಯವನ್ನು ನಾರಾಯಣಪುರ ಆಣೆಕಟ್ಟು ಕೆಲಸ ಮುಗಿಯುವುದರೊಳಗೆ ಆಗಬೇಕೆಂಬುದು ನಮ್ಮ ಆಸೆ.

ಶ್ರೀ ಡಿ. ದೇವರಾಜ ಅರಸ್ :— ನಾನು ಇಷ್ಟು ಹೊತ್ತು ಹೇಳಿರುವುದು ಅದನ್ನೇ, ದೇವಸ್ಥಾನ ಉಳಿಸುವುದಕ್ಕೆ ಪದಿನೆಂಟಲ್ಲ ಇಪ್ಪತ್ತೈದು ಲಕ್ಷ ರೂಪಾಯಿಗಳಾದರೂ ಖರ್ಚು ಮಾಡುತ್ತೇವೆ. ದೇವಸ್ಥಾನ ಉಳಿಸುತ್ತೇವೆ.

---

† indicates that remarks or speeches have not been revised by the member concerned,